ಆ ಪಟ್ಟಿಗೆ ಸೇರಿಸುತ್ತೇವೆಂದು ತಾವು ಹೇಳಿಬಿಡಿ ತಾವು ದಯವಿಟ್ಟು ಕಂದಾಯ ಮಂತ್ರಿಗಳಿಗೆ ಸಪೋರ್ಟ್ ಮಾಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕಂದಾಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ ಆ ಸಮಿತಿ ಕೇಂದ್ರ ಸರ್ಕಾರದ ಮಾನದಂಡಗಳು, ಜಿಲ್ಲಾಧಿಕಾರಿಗಳ ವರದಿ, ಮಳೆಯ ಪ್ರಮಾಣ, ಅಲ್ಲಿ ಎಷ್ಟು ದಿನಗಳಿಂದ ಮಳೆ ಬಿದ್ದಿಲ್ಲ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿ 64 ಪ್ರದೇಶಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ್ದಾರೆ. ನೀವು ಹೇಳುತ್ತಿರುವುದು, ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆ, ಕಡೂರು ಹೀಗೆ ಕೆಲವು ಭಾಗಗಳನ್ನು ಬರಪ್ರದೇಶವೆಂದು ಘೋಷಿಸಲು ಶಿಫಾರಸ್ಸು ಮಾಡಿದ್ದಾರೆಂದು ಹೇಳುತ್ತಿದ್ದೀರಿ. ಇದನ್ನು ಮತ್ತೆ ಆ ಸಮಿತಿಯವರು ಪರಿಶೀಲನೆ ಮಾಡಿ ಶಫಾರಸ್ಸು ಮಾಡಿದರೆ ಆ ಪ್ರದೇಶಗಳನ್ನು ಬರಪೀಡಿತ ಪ್ರದೇಶಗಳ ಪಟ್ಟಿಯಲ್ಲಿ ಸೇರಿಸುತ್ತಾರೆ

ಶ್ರೀ ವೈ.ಎಸ್.ವಿ ದತ್ತಾ : ಕೆಲವು ಕಡೆ ಜಿಲ್ಲಾಧಿಕಾರಿಗಳು ಇನ್ನೂ ವರದಿ ಕಳುಹಿಸಿಲ್ಲ. ತಕ್ಷಣ ಕಳುಹಿಸುವುದಕ್ಕೆ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ಕೊಡಿ.

ಶ್ರೀ ಸಿದ್ಧರಾಮಯ್ಯ : ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಕೇಂದ್ರ ಸರ್ಕಾರದ ಮಾನದಂಡಗಳ ಆಧಾರದ ಮೇಲೆ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುತ್ತೇವೆ.

ಅಧ್ಯಕ್ಷರು : ಓ.ಕೆ. ಮುಂದಿನ ಪ್ರಶ್ನೆ ಕೃಷ್ಣಪ್ಪನವರು ಕೇಳಿ. ಅವರು ಇಲ್ಲ ಮುಂದಿನ ಪ್ರಶ್ನೆ ಮಾಲಕರೆಡ್ಡಿಯವರು ಕೇಳಿ.

Social SecuritySchemes

92 ಡಾ.ಮಾಲಕರೆಡ್ಡಿ ಎ.ಬಿ.(ಯಾದಗಿರಿ) . ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಾದಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಸಂಧ್ಯಾ ಸುರಕ್ಷಾ ಯೋಜನೆ, ಅಂಗವಿಕಲ ಪಿಂಚಣಿ, ವಿಧವಾ ವೇತನ ಸೇರಿದಂತೆ ವಿವಿಧ ಸಾಮಾಜಿಕ ಸುರಕ್ಷಾ ಯೋಜನೆಗಳಡಿ ಸ್ವೀಕರಿಸಿರುವ ಅರ್ಜಿಗಳೆಷ್ಟು;

ಆ) ವಿವಿಧ ಯೋಜನೆಗಳಡಿ ಬಂದಿರುವ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳನ್ನು ಪುರಸ್ಕರಿಸಿ ಪಿಂಚಣಿ ಮಂಜೂರು ಮಾಡಲಾಗಿದೆ.

ಇ) ಬಾಕಿ ಉಳಿದಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸಿ ಪಿಂಚಣಿ ಬಿಡುಗಡೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಈ) ಅರ್ಹ ಫಲಾನುಭವಿಗಳನ್ನು ಹುಡುಕಿ ಅವರಿಗೆ ಸಹಾಯ ಮಾಡಲು ಅಥವಾ ಈ ಸೌಲಭ್ಯಗಳ ಕುರಿತು ಅರ್ಹರಿಗೆ ತಿಳುವಳಿಕೆ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಪಿಂಚಣಿ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆಯೇ? ಅಂತಹ ಪಿಂಚಣಿ ದಾರರ ಸಂಖ್ಯೆ ಎಷ್ಟು; ಬಂದಿರುವ ಹೊಸ ಅರ್ಜಿಗಳ ಸಂಖ್ಯೆ ಎಷ್ಟು, ಪಿಂಚಣಿ ರದ್ದುಪಡಿಸಿರುವ ಪಿಂಚಣಿದಾರರಿಗೆ ಮರು ಅರ್ಜಿ ಸಲ್ಲಿಸುವ ಸಮಯ ನಿಗಧಿಪಡಿಸಲಾಗಿದೆಯೇ?

ಶ್ರೀ ಎ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಯಾದಗಿರಿ ವಿಧಾನಸಭಾ ಕ್ಷೇತ್ರದಲ್ಲಿ 2013–14ನೇ ಸಾಲಿನಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಕೆಳಕಂಡಂತೆ ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಕ್ರ.ಸಂ	ಯೋಜನೆ	ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ
1	ಸಂಧ್ಯಾ ಸುರಕ್ಷಾ ಯೋಜನೆ	11394
2	ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ	174

3	ನಿರ್ಗತಿಕ ವಿಧವಾ ವೇತನ	5714
4	ಅಂಗವಿಕಲ ವೇತನ	2270
5	ಮನಸ್ವಿನ	21
6	ಮೈತ್ರಿ	0
ಒಟ್ಟು		**19573**

ಆ) ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಸ್ವೀಕರಿಸಲಾದ ಅರ್ಜಿಗಳ ಪೈಕಿ 11006 ಅರ್ಜಿಗಳನ್ನು ಪುರಸ್ಕರಿಸಿ ಪಿಂಚಣಿ ಮಂಜೂರು ಮಾಡ ಲಾಗಿದೆ.

ಇ) ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ. ಅರ್ಹ ಫಲಾನುಭವಿ ಗಳಿಗೆ ಪಿಂಚಣಿಯನ್ನು ಮಂಜೂರು ಮಾಡಲಾಗುತ್ತಿದೆ.

ಈ) 1 ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕು ಕಛೇರಿ ಗಳಲ್ಲಿ ಪ್ರಚಾರ ಫಲಕಗಳನ್ನು ಇಡಲಾಗಿದೆ.

2 ಪ್ರತಿ ತಿಂಗಳು ಹೋಬಳಿ ಮಟ್ಟದಲ್ಲಿ ಉಪವಿಭಾಗಾದಿಕಾರಿಗಳ ನೇತೃತ್ವದಲ್ಲಿ ನಡೆಯುವ ಪಿಂಚಣಿ ಅದಾಲತ್‌ಗಳಲ್ಲಿ ಯೋಜನೆಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

3. ಯೋಜನೆಯ ಬಗ್ಗೆ ಅರಿವು ಮೂಡಿಸುವ ಪ್ರಚಾರ ಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಲಾಗಿದೆ.

ಉ) 1. ಪಿಂಚಣಿ ವ್ಯವಸ್ಥೆಯನ್ನು ರದ್ದುಪಡಿಸಿರುವುದಿಲ್ಲ.

2. ಯಾದಗಿರಿ ಜಿಲ್ಲೆಯಲ್ಲಿ ಪಿಂಚಣಿ ಪ್ರಕರಣಗಳನ್ನು 11354 ಭೌತಿಕ ಪರಿಶೀಲನೆಯ ಸಮಯದಲ್ಲಿ ವಿವಿಧ ಕಾರಣಗಳಿಂದಾಗಿ ರದ್ದುಪಡಿಸ ಲಾಗಿರುತ್ತದೆ.

3. 2013–14ನೇ ಸಾಲಿನಲ್ಲಿ ಇದುವರೆವಿಗೂ ಸಾಮಾಜಿಕ ಭದ್ರತಾ ಯೋಜನೆಗಳಡಿ 19573 ಹೊಸ ಅರ್ಜಿಗಳನ್ನು ಸ್ವೀಕರಿಸಲಾಗಿದೆ

4. ಪಿಂಚಣಿ ಮರುಚಾಲನೆಗೊಳಿಸಲು ಸಮಯವನ್ನು ನಿಗಧಿ ಪಡಿಸಲಾಗಿರುವುದಿಲ್ಲ.

ಪೂರಕ ಟಿಪ್ಪಣ್ಣಿ

ಮಾನ್ಯ ಶಾಸಕರಾದ ಡಾ ಮಾಲಕರೆಡ್ಡಿ ಎಂ ಬಿ ಯಾದಗಿರಿ ವಿಧಾನಸಭಾ ಕ್ಷೇತ್ರ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 92 ಕ್ಕೆ ಪೂರಕ ಟಿಪ್ಪಣಿ.

ರಾಜ್ಯದಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ 37.17,244 (37,17 ಲಕ್ಷ) ಫಲಾನುಭವಿಗಳು ಪಿಂಚಣಿ ಪಡೆಯುತ್ತಿರುತ್ತಾರೆ. ಯಾದಗಿರಿ ಜಿಲ್ಲೆಯಲ್ಲಿ 2013–14 ನೇ ಸಾಲಿನಲ್ಲಿ ಏಪ್ರಿಲ್ ಮಾಹೆಯಿಂದ ಇಲ್ಲಿಯವರೆಗೂ 19573 ಅರ್ಜಿಗಳನ್ನು ಕೆಳಕಂಡಂತೆ ಸ್ವೀಕರಿಸಲಾಗಿದ್ದು 11006 ಪ್ರಕರಣಗಳನ್ನು ಮಂಜೂರು ಮಾಡಲಾಗಿದ್ದು, 1817 ಪ್ರಕರಣಗಳನ್ನು ತಿರಸ್ಕೃತಗೊಳಿಸಲಾಗಿರುತ್ತದೆ. 6750 ಪ್ರಕರಣಗಳು ಬಾಕಿ ಇರುತ್ತವೆ. ತಾಲ್ಲೂಕುವಾರು ವಿವಿರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿರುತ್ತದೆ.

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಅರ್ಹ ಫಲಾನುಭವಿಗಳ ಕುಂದುಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳು ಹೋಬಳಿ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪಿಂಚಣಿ ಅದಾಲತ್ ಗಳನ್ನು ನಡೆಸಲಾಗುತ್ತಿದೆ ಇದುವರೆವಿಗೂ 607 ಪಿಂಚಣಿ ಅದಾಲತ್‌ಗಳನ್ನು ನಡೆಸಲಾಗಿದ್ದು ಇದರಲ್ಲಿ 74404 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು 53238 ಅರ್ಜಿಗಳು ವಿಲೇವಾರಿಗೊಳಿಸಲಾಗಿರುತ್ತದೆ. ಜಿಲ್ಲಾವಾರು ವಿವಿರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿರುತ್ತದೆ.

2011ರಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಫಲಾನುಭವಿಗಳ ಸಂಖ್ಯೆಯು ಗಣನೀಯವಾಗಿ ಏರಿಕೆಯಾದ ಕಾರಣ ಫಬ್ರವರಿ 2011 ರಿಂದ ಡಿಸಂಬರ್ 2011 ರವರೆಗೂ ಸದರಿ ಯೋಜನೆಗಳಡಿ ಹೊಸ ಮಂಜೂ

ರಾತಿ ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು. ಭೌತಿಕ ಪರಿಶೀಲನಾ ಕಾರ್ಯದ ಸಮಯದಲ್ಲಿ ಸುಮಾರು 9.57 ಲಕ್ಷ ಪ್ರಕರಣಗಳಲ್ಲಿ ಪಿಂಚಣಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಸದರಿ ಕಾರ್ಯದಲ್ಲಿ ಅರ್ಹ ಫಲಾನುಭವಿಗಳ ಪಿಂಚಣಿ ಸ್ಥಗಿತಗೊಳಿಸಲಾಗಿರುವುದು ಮನಗಂಡ ಸರ್ಕಾರ ಅರ್ಹ ಫಲಾನುಭವಿಗಳ ಪಿಂಚಣಿಯನ್ನು ಮರುಚಾಲನೆಗೊಳಿಸಲು ಸುತ್ತೋಲೆ ಹೊರಡಿಸಿತ್ತು ಅದರಂತೆ, 184719 ಫಲಾನುಭವಿಗಳ ಪಿಂಚಣಿಯನ್ನು ಮರು ಸ್ಥಾಪನೆಗೊಳಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–3 ರಲ್ಲಿ ಲಗತ್ತಿಸಿರುತ್ತದೆ. ಪಿಂಚಣಿ ಮರುಚಾಲನೆಗೊಳಿಸಲು ಸಮಯವನ್ನು ನಿಗದಿ ಗೊಳಿಸಿರುವುದಿಲ್ಲ.

Annexure-1

Taluk	SSY					DWP				PNP				OAP				Matrimony				Mytri			
	Applications received	Sanctioned	Rejected	Balance	Applications received	Sanctioned	Rejected	Balance	Applications received	Sanctioned	Rejected	Balance	Applications received	Sanctioned	Rejected	Balance	Applications received	Sanctioned	Rejected	Balance	Applications received	Sanctioned	Rejected	Balance
Gummanal	2272	1455	150	667	7	1108	55	178	340	476	9	61	65	55	1	14	5	3	2	2	1	0	0	0
Hunsgi	1137	753	151	633	9	196	39	284	224	106	13	105	1	0	1	0	0	0	0	0	0	0	0	0
Shahpur	1785	1039	194	553	510	337	80	339	458	317	31	110	5	3	2	0	2	0	0	2	0	0	0	0
Shorapur	1618	508	387	723	645	243	183	219	418	192	77	149	0	0	0	0	2	0	0	2	0	0	0	0
Vadagera	658	508	26	134	735	192	3	40	274	187	6	32	85	56	3	26	1	0	0	1	0	0	0	0
Yadgir	3913	2079	326	1508	2263	1436	96	731	593	362	21	2.6	18	2	0	16	11	0	0	11	0	0	0	0
Total	11394	5942	1234	4218	5714	3512	417	2785	2770	1440	157	673	174	111	7	56	21	3	2	18	0	0	0	0

Total Applications	
Received	19573
Sanctioned	11006
Rejected	1817
Balance	6750



ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ

ಫಲಾನುಭವಿಗಳ ವಿವರ – October 2013 ರ ಅಂತ್ಯಕ್ಕೆ

ಕ್ರ ಸಂ	ಜಿಲ್ಲೆ	ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ	ಅಂಗವಿಕಲ ಮಕ್ಕಳ ವೇತನ (75)	ಅಂಗವಿಕಲ ಪೋಷಕರ ಭತ್ಯೆ	ಅಂಧತ್ವ ನಿವಾರಣಾ ಯೋಜನೆ	ಒಟ್ಟು ಫಲಾನುಭವಿಗಳು
1	ಬಾಗಲಕೋಟೆ	12256	42401	17669	10221	27890	51553	134100
2	ಬೆಂಗಳೂರು ನಗರ	27669	60998	13097	13477	26574	71157	192373
3	ಬೆಂಗಳೂರು ಗ್ರಾಮಾಂತರ	19987	21419	5767	3092	8859	14521	83786
4	ಬೆಳಗಾಂ	44557	73610	33033	21270	54253	103269	275989
5	ಬಳ್ಳಾರಿ	25414	49283	17136	8040	26066	46224	146987
6	ಬೀದರ್	14188	27015	14374	5244	19618	52797	113618
7	ವಿಜಾಪುರ	30511	41287	22216	4513	26729	51716	150243
8	ಚಾಮರಾಜನಗರ	39557	35399	10732	4910	15642	28738	119336
9	ಚಿಕ್ಕಮಗಳೂರು	5061	21148	6758	4403	11161	29379	66749
10	ಚಿತ್ರದುರ್ಗ	11745	27840	10089	5507	15596	41188	96369
11	ದಕ್ಷಿಣ ಕನ್ನಡ	7385	29483	12921	10301	23222	46806	106896
12	ದಾವಣಗೆರೆ	10878	40689	13556	9301	22857	56837	131271
13	ಧಾರವಾಡ	14792	39427	13960	8361	22321	42426	118866
14	ಗದಗ	24186	30148	13389	9084	22473	30486	107293
15	ಗುಲ್ಬರ್ಗಾ	35994	29144	18885	4708	23093	37815	126040
16	ಹಾಸನ	52281	55173	17772	5771	23543	56025	183122
17	ಹಾವೇರಿ	6736	45156	16284	12645	28929	42416	134767
18	ಕಾರವಾರ	5079	24475	9536	4099	13635	25470	68659
19	ಕೊಲಾರ	27945	34978	8558	8797	17350	51810	132083
20	ಕೊಪ್ಪಳ	11626	29271	12724	8156	20880	44053	105830
21	ಮಡಿಕೇರಿ	2226	10831	2567	1857	4424	14024	31505
22	ಮಂಡ್ಯ	35936	75779	21313	8655	29968	68333	210016
23	ಮಂಗಳೂರು	4965	28379	9222	6513	15735	26387	75466
24	ಮೈಸೂರು	28952	63050	19030	10849	29879	70999	192880
25	ರಾಯಚೂರು	16433	31399	10280	4948	15218	28175	91225
26	ರಾಮನಗರ	26981	36730	10890	4948	15838	44009	123957
27	ಶಿವಮೊಗ್ಗ	6404	25892	10436	6290	16726	30021	76646
28	ತುಮಕೂರು	18153	48377	23286	12059	35345	84397	186272
29	ಉಡುಪಿ	3031	24668	6228	5104	11332	38059	77690
30	ಯಾದಗಿರಿ	6607	15347	7001	3411	10412	30838	63204
	ಒಟ್ಟು	577535	1118696	408209	227359	635568	1385415	3717244

ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ								
ಫಲಾನುಭವಿಗಳ ವಿವರ –October 2013 ಅಂತ್ಯಕ್ಕೆ								
ಕ್ರ.ಸಂ	ಜಿಲ್ಲೆ	ವೃದ್ಧಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ	ಅಂಗವಿಕಲ ವೇತನ (75%)	ಅಂಗವಿಕಲ ವೇತನ ಒಟ್ಟು	ಸಂಧ್ಯಾ ಸುರಕ್ಷಾ ವೇತನ	ಒಟ್ಟು ಫಲಾನುಭವಿಗಳು
1	ಬಾಗಲಕೋಟೆ	12256	42401	17669	10221	27890	51553	134100
2	ಬೆಂಗಳೂರು ನಗರ	27669	60998	13097	13477	26574	77132	192373
3	ಬೆಂಗಳೂರು ಗ್ರಾಮಾಂತರ	19987	21419	5767	3092	8859	33521	83786
4	ಬೆಳಗಾಂ	44557	73610	33033	21220	54253	103569	275989
5	ಬಳ್ಳಾರಿ	25414	49283	17136	8930	26066	46224	146987
6	ಬೀದರ್	14188	27015	14374	5244	19618	52797	113618
7	ಬಿಜಾಪುರ	30511	41287	22216	4513	26729	51716	150243

8	ಚಾಮರಾಜನಗರ	39557	35399	10732	4910	15642	28738	119336
9	ಚಿಕ್ಕಮಂಗಳೂರು	5061	21148	6758	4403	11161	29379	66749
10	ಚಿಕ್ಕಬಳ್ಳಾಪುರ	11745	27840	10089	5507	15596	41188	96369
11	ಚಿತ್ರದುರ್ಗ	7385	29483	12921	10301	23222	46806	106896
12	ದಾವಣಗೆರೆ	10878	40689	13556	9301	22857	56847	131271
13	ಧಾರವಾಡ	14792	39327	13960	8361	22321	42426	118866
14	ಗದಗ್	24186	30148	13389	9084	22473	30486	107293
15	ಗುಲ್ಬರ್ಗಾ	35994	29144	18885	4708	23093	37815	12600
16	ಹಾಸನ	52281	55173	17772	5771	23543	50025	18122
17	ಹಾವೇರಿ	6736	45156	16284	12645	28929	47446	18267
18	ಕಾರವಾರ	5079	24475	9536	4099	13635	25470	68659
19	ಕೋಲಾರ	27945	34978	8558	8792	17350	51810	132083

20	ಕೊಪ್ಪಳ	11626	29271	12724	8156	20880	44053	105830
21	ಮಾಡಿಕೇರಿ	2226	10831	2567	1857	4424	14024	31505
22	ಮಂಡ್ಯ	35936	75779	21313	8655	29968	68333	210016
23	ಮಂಗಳೂರು	4965	28379	9222	6513	15735	26387	75466
24	ಮೈಸೂರು	28952	63050	19030	10849	29879	70999	192880
25	ರಾಯಚೂರು	16433	31399	10280	4938	15218	28175	91225
26	ರಾಮನಗರ	26981	36730	10890	4948	15838	44008	123557
27	ಶಿವಮೊಗ್ಗ	6404	25892	10436	6290	16726	30624	79646
28	ತುಮಕೂರು	18153	48377	23286	12059	35345	84397	186272
29	ಉಡುಪಿ	3031	24668	6228	5104	11332	38659	77690
30	ಯಾದಗಿರಿ	6607	15347	7001	3411	10412	30838	63204
ಒಟ್ಟು		**577535**	**1118696**	**408209**	**227359**	**635568**	**1385445**	**3717244**

ಪೂರಕ ಟಿಪ್ಪಣಿ ಅನುಬಂಧ – 2					
ಪಿಂಚಣಿ ಅದಾಲತ್‌ಗಳ ಜಿಲ್ಲಾವಾರು ಮಾಹಿತಿ					
ಕ್ರ.ಸಂ	ಜಿಲ್ಲೆ	ಪಿಂಚಣಿ ಅದಾಲತ್‌ಗಳ ಸಂಖ್ಯೆ	ಪ್ರಕೃತಿ	ವಿಲೆ	ಬಾಕಿ
1	ಬಾಗಲಕೋಟೆ	67	2044	2044	0
2	ಬೆಂಗಳೂರು	23	1674	0	1674
3	ಬೆಂಗಳೂರು ಗ್ರಾಮಾಂತರ	5	441	398	43
4	ಬೆಳಗಾವಿ	35	33009	26810	6199
5	ಬಳ್ಳಾರಿ	17	1135	959	176
6	ಬೀದರ್	40	3376	2276	1100
7	ಬಿಜಾಪುರ	28	3569	3046	523
8	ಚಾಮರಾಜನಗರ	9	1269	1200	69
9	ಚಿಕ್ಕಮಂಗಳೂರು	30	271	271	0
10	ಚಿಕ್ಕಬಳ್ಳಾಪುರ	6	461	283	178
11	ಚಿತ್ರದುರ್ಗ	8	343	263	80
12	ದಕ್ಷಿಣಕನ್ನಡ	15	349	332	17
13	ದಾವಣಗೆರೆ	21	714	611	103
14	ಧಾರವಾಡ	14	960	877	83

15	ಗದಗ	9	1281	1073	208
16	ಗುಲ್ಬರ್ಗಾ	11	1926	573	1353
17	ಹಾಸನ	14	185	185	0
18	ಹಾವೇರಿ	17	1412	938	474
19	ಕೊಡಗು	5	322	299	23
20	ಕೋಲಾರ	14	7572	2871	4701
21	ಕೊಪ್ಪಳ	22	121	121	0
22	ಮಂಡ್ಯ	9	335	223	112
23	ಮೈಸೂರು	15	2435	1906	529
24	ರಾಯಚೂರು	20	2656	1029	1605
25	ರಾಮನಗರ	18	1347	898	449
26	ಶಿವಮೊಗ್ಗ	36	1127	296	831
27	ತುಮಕೂರು	49	1744	1495	249
28	ಉಡುಪಿ	5	1346	1001	345
29	ಉತ್ತರಕನ್ನಡ	30	354	346	8
30	ಯಾದಗಿರಿ	15	626	614	12
ಒಟ್ಟು		**607**	**74404**	**53238**	**21144**

ಶ್ರೀ ಎ.ಬಿ.ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಮತ್ತು ಉಪ ಪ್ರಶ್ನೆಗಳಿಗೆ ಉತ್ತರ ಬಂದಿದೆ. ಉಪ ಪ್ರಶ್ನೆ(ಉ) ಪಿಂಚಣಿ ವ್ಯವಸ್ಥೆಯನ್ನು ರದ್ದು ಮಾಡಲಾಗಿದೆಯೆ? ಬಹುಶಃ ಪ್ರಶ್ನೆ ತಪ್ಪಾಗಿ ಅಚ್ಚಾಗಿರಬಹುದು. ಈಗಾಗಲೇ ಪಿಂಚಣಿ ಪಡೆಯತಕ್ಕಂತವರು ಎಷ್ಟು ಜನ? ಬಹುಶಃ ಪ್ರಶ್ನೆಯು ಅಚ್ಚಾಗಿರುವಲ್ಲಿ ತಪ್ಪಾಗಿರಬೇಕು ಆದರೆ, ಮುಂದೆ ತಾವು ಏನು ಹೇಳಿದಿರಿ, ಬಂದಿರುವ ಹೊಸ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಕೇಳಿದರೆ ತಾವು ಉತ್ತರ ಹೇಳಿದ್ದೀರಿ. ಪಿಂಚಣಿದಾರರಿಗೆ ಮರು ಅರ್ಜಿ ಸಲ್ಲಿಸುವ ಸಮಯ ನಿಗದಿಪಡಿಸಲಾಗಿದೆಯೆ? ಎಂದು ಕೇಳಿದ್ದಕ್ಕೆ, ತಾವು ಪಿಂಚಣಿ ಮರುಚಾಲನೆಗೊಳಿಸಲು ಸಮಯವನ್ನು ನಿಗದಿ ಪಡಿಸಲಾಗಿರುವುದಿಲ್ಲವೆಂದು ಹೇಳಿದ್ದೀರಿ.

ಈ ಸಂದರ್ಭದಲ್ಲಿ ನಾನೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಸುಮಾರು 11,354 ಜನರಿಗೆ ಪೊಂಚಣಿಯನ್ನು ರದ್ದುಪಡಿಸಿದ್ದೀರಿ. ಯಾವ ಆಧಾರದ ಮೇಲೆ ರದ್ದುಪಡಿಸಲಾಗಿದೆ ಎಂದರೆ, ಇದನ್ನು ವಿವೇಚನಾ ರಹಿತವಾಗಿ ರದ್ದುಪಡಿಸಲಾಗಿದೆ. ಸುಮಾರು 15 ವರ್ಷಗಳಿಂದ ಪಿಂಚಣಿ ಪಡೆಯುತ್ತಿದ್ದವರಿಗೆ ಇವತ್ತಿನದವಸ ತಾವು ಏಕಾಏಕಿ ರದ್ದುಪಡಿಸಿದರೆ ಅವರ ಜೀವನದ ಗತಿ ಏನು? ದಯವಿಟ್ಟು ಇದಕ್ಕೆ ಉತ್ತರ ಹೇಳಬೇಕು.

ಶ್ರೀ ವಿ.ಶ್ರೀನಿವಾಸ ಪ್ರಸಾದ್: ರದ್ದು ಪಡಿಸಿರುವುದಕ್ಕೆ ಕಾರಣ ಏನೆಂದು ಕೇಳುತ್ತಿದ್ದೀರಾ?

ಡಾ:ಎ.ಬಿ.ಮಾಲಕರೆಡ್ಡಿ :– ಹೌದು, ಕಾರಣ ಏನೆಂದು ಹೇಳಿ.

ಶ್ರೀ ವಿ.ಶ್ರೀನಿವಾಸ ಪ್ರಸಾದ್ :– ಮಾನ್ಯ ಅಧ್ಯಕ್ಷರೆ, ಒಂದು ಹಂತದಲ್ಲಿ ಅಂದರೆ, ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಪಿಂಚಣಿಗಳು ಬಹಳಷ್ಟು ಜಾಸ್ತಿ ಆಯಿತು. ಅಂದರೆ, ಸುಮಾರು 1:2 ಆಗಿತ್ತು. ಈ ಕಾರಣಕ್ಕಾಗಿ ಏಕಾಏಕಿ ಏತಕ್ಕಾಗಿ ಇಷ್ಟೊಂದು ಜಾಸ್ತಿ ಆಯಿತೆಂಬ ಉದ್ದೇಶದಿಂದ Physical verification ಮಾಡಿಸಲಾಗಿದೆ. ಒಬೊಬ್ಬರು ಎರಡೆರಡು ಪಿಂಚಣಿಯನ್ನು ಪಡೆದುಕೊಳ್ಳುತ್ತಿದ್ದರು. ಮತ್ತೆ ಕೆಲವರು ಬೇರೆ ಬೇರೆ ಕಡೆ ಹೊರಟು ಹೋಗಿದ್ದರು. ಇದೆಲ್ಲ ಮಧ್ಯೆ ನಿಂತುಹೋಗಿತ್ತು. ಈ ಬಗ್ಗೆ Physical verification

ಆದ ಮೇಲೆ ಮತ್ತೆ ಅದಕ್ಕೆ ಚಾಲನೆ ಕೊಡಲಾಗುತ್ತದೆ. ಈ ರೀತಿಯಾದ ಲೋಪದೋಷಗಳು ಅದರಲ್ಲಿ ಕಂಡು ಬಂದ ಹಿನ್ನೆಲೆಯಲ್ಲಿ ಅವುಗಳನ್ನು ಕೈಬಿಟ್ಟಿದ್ದಾರೆ. ನಮ್ಮ ಸರ್ಕಾರ ಬಂದ ನಂತರ ಪಿಂಚಣಿ ಅದಾಲತ್ ಮಾಡಿದ್ದೇವೆ. ಇದರಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು ತಹಸೀಲ್ದಾರ್ ಇರುತ್ತಾರೆ ಹಿಂದೆ ಯಾರ್ಯಾರನ್ನು ಪ್ರತಿಯೊಂದು ಗ್ರಾಮದಲ್ಲಿ ಕೈಬಿಟ್ಟಿದ್ದಾರೆಯೋ ಅಂಥವರಿಗೂ ಸಹ ಪಿಂಚಣಿ ಕೊಡಬೇಕು, ಇವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಬಾರದೆಂದು ಮಾಡಲಾಗಿದೆ. ಮತ್ತೆ ಹೊಸ ಪಿಂಚಣಿಗೆ ಅರ್ಹತೆ ಇರುವವರೆಗೂ ಸಹ ಕೊಡಬೇಕೆಂದು ಇದೆ. ಇದಕ್ಕಾಗಿ ಪಿಂಚಣಿ ಅದಾಲತ್ ಅನ್ನು ಮಾಡಿದ್ದೇವೆ. ಇದರ ಮೂಲಕ ಅರ್ಹರಿಗೆ ಅಂದರೆ, ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿ ಬರತಕ್ಕಂಥ ಯಾವುದೇ ವ್ಯಕ್ತಿಗೆ ಇದರಿಂದ ವಂಚಿತರಾಗದೆ ಅವರಿಗೆ ಯಾವುದೇ ರೀತಿಯ ಅನ್ಯಾಯವಾಗದ ರೀತಿಯಲ್ಲಿ ಬಹಳ ವ್ಯವಸ್ಥಿತವಾಗಿ ಅದನ್ನು ಮಾಡುತ್ತಿದ್ದೇವೆ. ಇದು ತುಂಬಾ ಚೆನ್ನಾಗಿ ಆಗುತ್ತಿದೆ. ಪ್ರತಿ ಹೋಬಳಿಗಳಲ್ಲಿಯೂ ಸಹ ಪಿಂಚಣಿ ಅದಲಾತ್ ಆಗುತ್ತಿವೆ. ಈ ರೀತಿಯಾಗಿರುವಂಥವುಗಳನ್ನು ನಾವು ಸರಿಪಡಿಸಿಕೊಡುತ್ತೇವೆ. ಯಾವ ಅರ್ಹರಿಗೆ ಸಿಗಬೇಕಾಗಿದೆಯೋ ಅಂಥವರಿಗೆ ಮತ್ತೆ ಕೊಡತಕ್ಕಂಥದ್ದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಡಾ: ಎ.ಬಿ.ಮಾಲಕರೆಡ್ಡಿ :– ಮಾನ್ಯ ಅಧ್ಯಕ್ಷರೆ, ಪಿಂಚಣಿ ಅದಾಲತ್ ಮಾಡಿ ಇದನ್ನು ಸರಿಪಡಿಸಿಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ, ಅಲ್ಲಿರುವ ಮಾನದಂಡದ ಪ್ರಕಾರ ಈ ಕೆಲಸ ಆಗುತ್ತಿಲ್ಲ. ಅಲ್ಲಿ ಅವರು ವಿವೇಚನರಹಿತವಾಗಿಯೇ ಮಾಡುತ್ತಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ :– ಪಿಂಚಣಿ ಅದಾಲತ್ ಅನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ಲಾಂಚ್ ಮಾಡಿದ್ದೇವೆ. ನನಗೆ ಬಂದಿರ ತಕ್ಕಂಥ ವರದಿ ಪ್ರಕಾರ ಅದರ ಪ್ರೋಗ್ರೆಸ್ ತುಂಬಾ ಚನ್ನಾಗಿದೆ. ಹಾಗೆಯೇ ನಾನು ಹೋದ ಕಡೆ ಇದರ ಬಗ್ಗೆ ರಿವ್ಯೂ ಮಾಡುತ್ತಿದ್ದೇನೆ. ಅಲ್ಲಿಯೂ ಕೂಡ ಸಣ್ಣಪುಟ್ಟ ಲೋಪದೋಷಗಳು ಕಂಡು ಬಂದರೆ ಅದನ್ನು ಸರಿಪಡಿಸಿ ಖಂಡಿತ ಮಾಡಿಕೊಡುತ್ತೇವೆ, ಮತ್ತೆ ತಾವೇ ಹೋಗಿ ಇದನ್ನು ಮಾಡಿಸಿಕೊಡಬಹುದು.

ಪ್ರತಿಯೊಬ್ಬರೂ ರಾಷ್ಟ್ರೀಯ ಭದ್ರತಾ ಯೋಜನೆ ಅಡಿಯಲ್ಲಿರಬೇಕೆಂಬ ಉದ್ದೇಶದಿಂದ ಪಿಂಚಣಿ ಅದಾಲತ್ ಅನ್ನು ಮಾಡಿದ್ದೇವೆ.

Loss of Farmers Crop by wild Animals

15 (01) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ) : ಮಾನ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವನ್ಯಜೀವಿಗಳ ದಾಳಿಯಿಂದ ಬೆಳೆಹಾನಿ ಮತ್ತು ಪ್ರಾಣ ಹಾನಿಯಾದರೆ ಆ ರೈತರಿಗೆ ಹಾಗೂ ಬೆಳೆಗೆ ಸರ್ಕಾರ ನೀಡುವ ಪರಿಹಾರದ ಮೊತ್ತ ಎಷ್ಟು, ಇದನ್ನು ಅಧಿಕಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ; ಪರಿಹಾರ ಮೊತ್ತದ ಏರಿಕೆಯ ಪ್ರಮಾಣ ಎಷ್ಟು,

ಆ) ಪರಿಹಾರ ನೀಡವ ಪ್ರಕ್ರಿಯೆಯ ಮಾನದಂಡಗಳು ಯಾವುವು;

ಇ) ಇದುವರೆಗೆ ಪರಿಹಾರವನ್ನು ನೀಡಲಾಗುತ್ತಿದ್ದುದು ನಿಜವೇ; ಈಗ ಬೆಳೆ ಹಾನಿಯ ಪ್ರಮಾಣಾನುಸಾರ ಪರಿಹಾರ ನಿಗಧಿಪಡಿಸಲಾಗುವುದೇ;

ಈ) ಅರಣ್ಯ ಇಲಾಖಾ ವ್ಯಾಪ್ತಿಯ ಪ್ರಾಣಿಗಳಿಂದ ಹಾನಿಯಾದರೂ ಪರಿಹಾರವನ್ನು ಕೃಷಿ ಇಲಾಖೆಯಿಂದ ನಿಗಧಿಪಡಿಸಿ ಬೆಳೆಹಾನಿಗೆ ಪರಿಹಾರ ನೀಡುವ ಕ್ರಮದ ಬಗ್ಗೆ ಎರಡೂ ಇಲಾಖೆಗಳ ಸಮನ್ವಯ ಏರ್ಪಡಿಸಲಾಗುವುದೇ (ವಿವರ ಒದಗಿಸುವುದು),

ಉ) ಪ್ರಸ್ತುತ ಒಂದು ಎಕರೆಗೆ ಎಷ್ಟು ಪರಿಹಾರ ಮೊತ್ತ ನೀಡಲಾಗುತ್ತಿತ್ತು, ಹೊಸ ಯೋಜನೆಯ ಕ್ರಮದಿಂದಾಗಿ ಬೆಳೆ ಹಾನಿಗೊಳಗಾದ ರೈತರಿಗೆ ಯಾವ ಬೆಳೆಗೆ ಎಷ್ಟು ಪರಿಹಾರ ನೀಡಲಾಗುವುದು ಹಾಗೂ ಕಾಡು ಪ್ರಾಣಿಯಿಂದ ಪ್ರಾಣ ಹಾನಿಯಾದರೆ ಪರಿಹಾರದ ಮೊತ್ತ ಎಷ್ಟು (ವಿವರ ಒದಗಿಸುವುದು)?